

# ಪ್ರಸಾದ-ಗಂಗಾ ಭೇಟಿ

ಆತ ಅವಳನ್ನು ನೋಡಿದ.

ಕುತೂಹಲದಿಂದ ಪ್ರಶ್ನಿಸಿದ, 'ಗಂಗಾ... ಯಾಕೆ ಇಲ್ಲಿಗೆ ನನ್ನನ್ನ ಬರ ಹೇಳಿದೆ...?'

'ನಿಮ್ಮನ್ನ ನೋಡ್ಲಿಕ್ಕೆ' ಪ್ರಸಾದನಿಗೆ ನಗು ಮುಖದಲ್ಲಿ ತಿಳಿಸಿದಳು.

ಒಬ್ಬರಿಗೊಬ್ಬರು ಹೇಳಿಟ್ಟಂತೆ ನವೆದು ಹೋಗಿದ್ದರು. ಆದರೆ ಈಗ ಇಬ್ಬರಿಗೂ ಮಳೆ ನೀರು ಕುಡಿದು ಸೋತ ಪೈರು ಚೈತನ್ಯ ಪಡೆದಂತೆ ಸಂತೋಷ ವ್ಯಕ್ತಪಡಿಸಿ ಕೊಂಡರು.

ಪ್ರಸಾದ ತನ್ನ ಕೈ ಚಾಚಿದ. ಅವಳದನ್ನು ಹಿಡಿದಾಗ ಅವನ ಕೈ ತಣ್ಣಗೆ ಕೊರೆಯುತ್ತಿತ್ತು. 'ಯಾಕೆ ಇಷ್ಟು ತಣ್ಣಗಿದೆ ನಿಮ್ಮ ಕೈ...?' ದನಿಯಲ್ಲಿ ಕೊರಗಿತ್ತು. 'ನೀನು ಆ ಶಿವಣ್ಣನ ದವಾ ತಗೊಬ್ಯಾಡ. ಅದನ್ನ ಹೇಳ್ಲಿಕ್ಕೆ ಬಂದಿ' ಅವನು ಉತ್ತರಿಸಬೇಕಿರಲಿಲ್ಲ. ಅದಕ್ಕೇ ಸುಮ್ಮನಿದ್ದ.

ಇಬ್ಬರೂ ದಿಬ್ಬದ ಮೇಲೆ ಕುಳಿತರು. ಮೌನವೂ ಕೆಲವೊಮ್ಮೆ ಮಾತಲ್ಲವೆ? ಈಗ ಮತ್ತಷ್ಟು ಮೋಡಗಳು